ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.—ಖಂಡ ೨

ಅಧ್ಯಕ್ಷರು.—ಖಂಡ ಎರಡು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

ಖಂಡ ಎರಡು ವಿಧೇಯಕದ ಅಂಗವಾಯಿತು.

ಮೊದಲನೆಯ ಖಂಡ ಇತ್ಯಾದಿ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ '' ಮೊದಲನೇ ಖಂಡ ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ. ''

ಪ್ರಸ್ತಾವನ್ನು ಅಂಗೀಕರಿಸಲಾಯಿತಂ

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು, ಸಂಸದೀಯ ವ್ಯವಹಾರಗಳು ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ ರ ಕರ್ನಾಟಕ ಕಾನೂನು ನೆರವು ಮಂಡಳಿ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೊರುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ. ''೧೯೮೭ ರ ಕರ್ನಾಟಕ ಕಾನೂನು ನೆರವು ಮಂಡಳಿ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು. ''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

೧೯೮೭ ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರನಿಷೇಧ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ನಗರಾಭಿವೃದ್ಧಿ, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ) ನಿಷೇಧ ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ'' ೧೯೮೭ ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸುವುದು ''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ ೨

ಅಧ್ಯಕ್ಷರು.—ಖಂಡ ಎರಡು ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ಎರಡು ವಿಧೇಯಕದ ಅಂಗವಾಗಿ ಸೇರಿಸಲ್ಪಟ್ಟಿತು)

ಖಂಡ ೩

ಅಧ್ಯಕ್ಷರು.—ಖಂಡ ೩ರ ಬಗ್ಗೆ ಮಾನ್ಯ ಬಿ. ಜಿ. ಕೊಟ್ರಪ್ಪ ಮತ್ತು ಮಾನ್ಯ ಶ್ರೀ ಬಿ. ಬಸವಲಿಂಗಪ್ಪನವರು ತಿದ್ದುಪಡಿ ಸೂಚನೆಗಳನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರ ತಿದ್ದುಪಡಿ ಸೂಚನೆಯನ್ನು ಮಂಡಿಸಬೇಕು.

† ಶ್ರೀ ಬಿ. ಜಿ. ಕೊಟ್ರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಈ ಒಂದು ನಿಯಮಕ್ಕೆ ಸೆಕ್ಷನ್ ೩ರಲ್ಲಿ ಪಕ್ಷಾಂತರ ಆಧಾರದ ಮೇಲೆ ಅನರ್ಹ ಎಂದು ವಿವರಣೆಗೆ ಈ ಉಪ ಪ್ರಕರಣದ ಉದ್ದೇಶಕ್ಕಾಗಿ (ಎ) ಎಂಬ ಭಾಗದಲ್ಲಿ ಇಷ್ಟು ಮಾತ್ರ ಇದೆ.

> "ಕೌನ್ಸಿಲರ್ ಆಗಿ ಅಥವಾ ಸಂದರ್ಭಾನುಸಾರ, ಸದಸ್ಯನಾಗಿ ಚುನಾಯಿತನಾದ ಒಬ್ಬ ವ್ಯಕ್ತಿಯು ಯಾವ ರಾಜಕೀಯ ಪಕ್ಷದಿಂದ ಅಪನನ್ನು ಅಂಥ ಕೌನ್ಸಿಲರ್ ಅಥವಾ ಸದಸ್ಯ ಸ್ಥಾನದ ಚುನಾವಣೆಗೆ ಅಭ್ಯರ್ಥಿಯಾಗಿ ನಿಲ್ಲಿಸಲಾಗಿತ್ತೋ ರಾಜಕೀಯ ಪಕ್ಷ ಯಾವುದಾದರೂ ಇದ್ದರೆ, ಆ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು"

ಆದರೆ ಸ್ವತಂತ್ರವಾಗಿ ಆರಿಸಿ ಬಂದ ಅಭ್ಯರ್ಥಿಗೆ ಯಾವುದೇ ಪಕ್ಷ ಸೇರತಕ್ಕ ಅವಕಾಶ ಇರಬೇಕು ಎನ್ನುವ ಉದ್ದೇಶದಿಂದ ಮೂಲನೇ ಖಂಡ (ಎ) ಬಗ್ಗೆ ತಿದ್ದುಪಡಿ ಸೂಚನೆಯನ್ನು ಮಾಡಿದ್ದೇನೆ. (ಎ) ಮುಂದುಗಡೆ ಈ ರೀತಿ ಇದೆ.—

> "೩ನೇ ಖಂಡ (೧)ನೇ ಉಪಖಂಡದ ವಿವರಣೆಯ (ಎ) ಬಾಬಿನ ಕೊನೆಯಲ್ಲಿ "ಅಥವಾ ಕೌನ್ಸಿಲರಾಗಿ ಅಥವಾ ಸಂದರ್ಭಾನುಸಾರ ಒಂದು ರಾಜಕೀಯ ಪಕ್ಷದಿಂದ ನಿಲ್ಲಿಸಿದ ಅಭ್ಯರ್ಥಿಯಲ್ಲದೆ ಅನ್ಯಥಾ ಸದಸ್ಯನಾಗಿ ಹಾಗೆ ಚುನಾಯಿತನಾದ ಒಬ್ಬ ವ್ಯಕ್ತಿಯು, ಅಂಥ ಚುನಾವಣೆಯ ತರುವಾಯದ ಆರು ತಿಂಗಳುಗಳ ಮುಕ್ತಾಯಕ್ಕೆ ಮೊದಲು ಅವನು ಯಾವ ರಾಜಕೀಯ ಪಕ್ಷಕ್ಕೆ ಸದಸ್ಯನಾಗುವನೋ, ಆ ರಾಜಕೀಯ ಪಕ್ಷಕ್ಕೆ ಸೇರಿದವನೆಂದು ಭಾವಿಸತಕ್ಕದ್ದು"

ಈ 'ಎ' ಬಗ್ಗೆ ತಿದ್ದುಪಡಿಯನ್ನು ಮಾಡಿದ್ದೇನೆ.

ಇದರಲ್ಲಿ ಇನ್ನೊಂದು ತಿದ್ದುಪಡಿ ಇದೆ. ಅದೇನೆಂದರೆ ಇದೇ ೩ನೇ ಖಂಡದ ೨ನೇ ಉಪಖಂಡದಲ್ಲಿ "ಅಂಥ ಚುನಾವಣೆಯ ತರುವಾಯ" ಎಂಬ ಪದಗಳ ಬದಲು "ಅಂಥ ಚುನಾವಣೆಯ ಆನಂತರ ಆರು ತಿಂಗಳುಗಳ ಮುಕ್ತಾಯದ ತರುವಾಯ" ಎಂಬ ಪದಗಳನ್ನು ಪ್ರತಿಸ್ಥಾಪಿಸತಕ್ಕದ್ದು ಎಂದು ಕೊಟ್ಟಿದ್ದೇನೆ. ಆರು ತಿಂಗಳಾದ ಮೇಲೆ ಅಪರನ್ನು ಸೇರಿಸಿಕೊಳ್ಳಬಾರದು. ಒಂದು ವೇಳೆ ಅವರು ಸೇರಬೇಕಾದರೆ ಆರು ತಿಂಗಳೊಳಗೆ ಸೇರಬೇಕು. ಈ ತರಹ ಒಂದು ತಿದ್ದುಪಡಿಯನ್ನು ನಾನು ತಂದಿದ್ದೇನೆ. ಈ ಬಗ್ಗೆ ತಂದಿರತಕ್ಕಂಥ ಎರಡೂ ತಿದ್ದುಪಡಿಗಳು ತುಂಬಾ ಅವಶ್ಯಕವಾಗಿದೆ. ನಿನ್ನೆಯ ದಿವಸ ಇಲ್ಲಿ ಆದ ಗಲಾಟೆ ನೋಡಿದರೆ ಕ್ರಾಂತಿರಂಗ ಎಂದು ಏನು ಒಂದು ಗಲಾಟೆ ನಡೆಯಿತು ಆದರ ಬಗ್ಗೆ ಮಾನ್ಯ ಸಜೀರ್‌ಸಾಹೇಬರು ಸರಿಯಾಗಿ ಉತ್ತರ ಕೊಟ್ಟಿದ್ದಾರೆ- ಅದು ರಾಮಕೃಷ್ಣ ಹೆಗಡೆಯವರು ಮೂಲಭೂತ ಹಕ್ಕು ಎಂದು ಹೇಳಿದ್ದಾರೆ. ಹಾಗೇನೂ ಇಲ್ಲ. ಈ ಮೂಲಭೂತವಾದ ತತ್ವವನ್ನು ಪ್ರತಿಪಾದಿಸುವುದಕ್ಕೆ ಸ್ವತಂತ್ರರಾಗಿ ಆರಿಸಿ ಬಂದಂಥ ಸದಸ್ಯರು ಯಾರೇ ಇರಲಿ ಅವರು ಯಾವ ಪಕ್ಷಕ್ಕೇ ಸೇರಲಿ ಎನ್ನುವ ಒಂದು ವಿಶಾಲ ಮನೋಭಾವ ಇವರಿಗೆ ಇರಬೇಕು. ಅವರು ಸ್ವತಂತ್ರರಾಗಿ ಉಳಿಯಬಾರದು. ಸ್ವತಂತ್ರರಾಗಿ ಆಯ್ಕೆಯಾದವರು ಬಂದು ಅವರು ಯಾವ ಪಕ್ಷಕ್ಕೇ ಸೇರುವುದಕ್ಕೆ ಅಪೇಕ್ಷೆ ಪಡುತ್ತಾರೋ ಆ ಪಕ್ಷಕ್ಕೆ ಅವರು ಬಂದು ಸೇರುವುದಕ್ಕೆ, ಸೇರಿಸಿಕೊಳ್ಳುವುದಕ್ಕೆ ಈ ಒಂದು ಅವಕಾಶವನ್ನು ಕೊಡಬೇಕು ಎಂದು ಹೇಳಿದ್ದೇನೆ, ಅಂದರೆ ಅವರು ೬ ತಿಂಗಳೊಳಗೆ ಬಂದು ಸೇರಬೇಕು ಎನ್ನುವ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಈ ತಿದ್ದುಪಡಿಯನ್ನು ಈಗ ತಂದಿರುವ ತಿದ್ದುಪಡಿ ಮಸೂದೆಗೆ ಸೇರಿಸಿಕೊಳ್ಳಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

---

†ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗಾಗಲೇ ತಾವು ಈ ಬಗ್ಗೆ ಏನು ಒಂದು ಮಸೂದೆಯನ್ನು ತಂದಿದ್ದೀರಿ, ಅದರ ಉದ್ದೇಶ ಈಗ ಇರತಕ್ಕಂಥ ರಾಜಕೀಯ ತಿಳಿಯಾಗಿರಬೇಕು, ಕ್ಲೀನ್ ಪಾಲಿಟಿಕ್ಸ್ ಆಗಬೇಕು ಎನ್ನುವ ದೃಷ್ಟಿಯಿಂದ ಮತ್ತು ಆಡಳಿತದಲ್ಲಿ ಒತ್ತಡ ತರಬಾರದು ಮತ್ತು ಇದರ ಬಗ್ಗೆ ಯಾವುದೇ ಒಂದು ಆಸೆ ಆಮಿಷ ಇರಬಾರದು ಮತ್ತು ಹಣ ಮುಂತಾದ ಆಸೆಯನ್ನು ತೋರಿಸಿ ಆ ಸದಸ್ಯರನ್ನು ತೆಗೆದುಕೊಳ್ಳಬಾರದು, ಎನ್ನುವ ಉದ್ದೇಶ. ಇಂಥ ಒಂದು ಮಸೂದೆಯನ್ನು ಕೇಂದ್ರದಲ್ಲಿ ಈಗಾಗಲೇ ತಂದಿದ್ದಾರೆ. ನೀವೂ ಈ ಅಸೆಂಬ್ಲಿಯಲ್ಲೂ ತಂದಿದ್ದೀರಿ. ಈಗ ಸ್ಥಳೀಯ ಸಂಸ್ಥೆಗಳ ಬಗ್ಗೆ ಇಂಥ ಒಂದು ಮಸೂದೆಯನ್ನು ತಂದಿದ್ದೀರಿ. ಯಾವ ಉದ್ದೇಶಕ್ಕಾಗಿ ಇದನ್ನು ತಂದಿದ್ದೀರಿ? ಇದರಲ್ಲಿ ಸ್ವತಂತ್ರರಾಗಿ ಕನ್‌ಟೆಸ್ಟ್ ಮಾಡಿ ಆಯ್ಕೆಯಾದವರು ಆರು ತಿಂಗಳೊಳಗೆ ಅವನು ಯಾವ ರಾಜಕೀಯ ಪಕ್ಷಕ್ಕೆ ಸದಸ್ಯನಾಗುವನೋ, ಆ ರಾಜಕೀಯ ಪಕ್ಷಕ್ಕೆ ಸೇರಿದೆಪನು ಎಂದು ಹೇಳುವ ತತ್ವವನ್ನು ತಾವು ಹೇಳಿಕೊಂಡರೆ ಅದು ಸರಿಯೇ?

ಅಧ್ಯಕ್ಷರು.—ಮಾನ್ಯ ಸಚಿವರು ತಮ್ಮ ಅಭಿಪ್ರಾಯ ಇದರ ಬಗ್ಗೆ ಏನು ಎನ್ನುವುದನ್ನು ಇನ್ನೂ ಹೇಳಿಲ್ಲವಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಒಂದು ಸಂಶಯ ಏತಕ್ಕೆ ಬಂತು ಎಂದರೆ ನಿಮ್ಮ ರೂಲಿಂಗ್ ಪಾರ್ಟಿಯವರೇ ಇದನ್ನು ತಂದಿರುವುದನ್ನು ನೋಡಿ ಸಂಶಯ ಬಂದಿದೆ.

ಅಧ್ಯಕ್ಷರು.—ಮಾನ್ಯ ಸಚಿವರು ಮೊದಲು ತಮ್ಮ ಅಭಿಪ್ರಾಯ ಹೇಳಲಿ. Please don't presume- ಮಿಕ್ಕಾನ್ಯ ಸದಸ್ಯರು ತಮ್ಮ ಅಭಿಪ್ರಾಯ ಹೇಳಿದ್ದಾರೆ ಆಷ್ಟೆ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಅವರ ಅಭಿಪ್ರಾಯ ಹೇಗೇ ಇರಲಿ. ನಾವೂ ಕೂಡ ನಮ್ಮ ಅಭಿಪ್ರಾಯ ಹೇಳಬೇಕಾಗುತ್ತದೆ. ನಮ್ಮ ಅಭಿಪ್ರಾಯವನ್ನು ತಿದ್ದುಪಡಿ ಬಂದಮೇಲೂ ಹೇಳಿ ಬಹುದು. ಅನಂತರ ಅದನ್ನು ವಿರೋಧಿಸಲೂ ಬಹುದು. ಈಗಲೂ ನಮ್ಮ ಅಭಿಪ್ರಾಯ ಹೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾವು ಈಗ ಅವರು ತಂದಿರತಕ್ಕಂಥ ತಿದ್ದುಪಡಿಯನ್ನು ಎತಕ್ಕೆ ಒಪ್ಪುವುದಿಲ್ಲ ಎಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ಅಭಿಪ್ರಾಯ ಮತ್ತು ಅವರ ಅಭಿಪ್ರಾಯ ಒಂದೇ ಆಗಿದ್ದರೆ ಸಂತೋಷ. ಮುತ್ತೆ ನಾಳೆ ಯಾವುದೇ ರಾಜಕೀಯ ಪಕ್ಷ ಅಧಿಕಾರಕ್ಕೆ ಬರಬಹುದು, ಇವೊತ್ತು ಜನತಾ ಇರಬಹುದು, ನಾಳೆ ಕಾಂಗ್ರೇಸ್ ಇರಬಹುದು, ಅಥವಾ ಮತ್ತೊಂದು ಪಕ್ಷ ಇರಬಹುದು. ಆದರೆ ನಾನು ಹೇಳತಕ್ಕಂಥದ್ದು ಏನೆಂದರೆ ಒಂದು ಕ್ಷಣೇಳಿ ನಾವು ಇದನ್ನು ಒಪ್ಪಿದರೆ ನಾಳೆ ದಿವಸ ಪ್ರತಿ ಹಳ್ಳಿಗಳಲ್ಲೂ, ಮಂಡಲ್ ಪಂಚಾಯತ್‌ಗಳಲ್ಲೂ ಜಿಲ್ಲಾ ಪರಿಷತ್‌ಗಳಲ್ಲೂ ಹಣ ಕೊಟ್ಟು ಆ ಜನರನ್ನೆಲ್ಲಾ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುವ ಕೆಲಸ ಮಾಡಬಹುದು. ಇವೊತ್ತು ಅನೇಕ ಕಡೆಗಳಲ್ಲಿ ೫೦-೫೦ ಪರ್ಸೆಂಟ್ ಇರತಕ್ಕಂಥ ಮಂಡಲ್ ಪಂಚಾಯತ್‌ಗಳು ಇವೆ. ಒಂದೊಂದು ಜಿಲ್ಲೆಯಲ್ಲಿ ೨೦-೩೦-೪೦-೫೦ ಇವೆ. ಕೆಲವು ತಾಲ್ಲೂಕುಗಳಲ್ಲಿ ೮-೯ ರವರೆಗೂ ಇವೆ. ಈ ಪಂಚಾಯತ್‌ಗಳಲ್ಲಿ ಸ್ವತಂತ್ರರಾಗಿ ಆಯ್ಕೆಯಾದವರು ಈ ರೀತಿ ಅವರು ಸೇರಿಸಿಕೊಳ್ಳಬಹುದು ಎನ್ನುವ ತಿದ್ದುಪಡಿಗೆ ನಾವು ಒಪ್ಪಿಗೆ ಕೊಟ್ಟರೆ ಇದರಿಂದ ಏನಾಗುತ್ತದೆಂದರೆ ಇದು ಒಂದು ಹಾರ್ಸ್ ಟ್ರೇಡಿಂಗ್ ತರಹ ಆಗುತ್ತದೆ. ಎಲ್ಲಾ ಕಡೆಯೂ ಈ ರೀತಿ ಹೇಳಿಕೊಂಡು ಬಂದರೆ ಈ ನೀತಿ ಸರಿಯಾದುದಲ್ಲ. ಇದರಿಂದ ಮುಂದೆ ಏನಾಗುತ್ತದೆ ಎಂದರೆ ಆಯ್ಕೆಯಾಗಿ ಬಂದಂಥ ಸದಸ್ಯರನ್ನು ಮುಚ್ಚಿಡುವುದಾಗಲಿ ಅಥವಾ ಒಯ್ದುಕೊಂಡು kidnap ಮಾಡುವುದಾಗಲೀ ನಡೆದು ಮುಂದೆ ಅವರು ಆ ಪಕ್ಷಕ್ಕೆ ಸೇರಿಸಿಕೊಳ್ಳುವಂಥ ಕೆಲಸವಾಗುತ್ತದೆ. ಈ ಒಂದು ತಿದ್ದುಪಡಿಯಿಂದ ಈ ಒಂದು ಕೆಲಸ ಮಾಡಬಹುದು ಎನ್ನುವುದು ಅವರ ಮನಸ್ಸಿನಲ್ಲಿದ್ದರೆ ಇದನ್ನು ಉಳಿಸಿಕೊಳ್ಳಬಹುದು ಇಲ್ಲದೇ ಹೋದರೆ ಈಗ ಇದರ ಬಗ್ಗೆ ಹೇಗೆ ಇದೆಯೋ ಹಾಗೆಯೇ ಇರಲಿ ಎಂದು ನಾನು ಹೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿಯ ಬಗ್ಗೆ ಇಲ್ಲಿ ಪರ ಮತ್ತು ವಿರುದ್ಧವಾದ ಅಭಿಪ್ರಾಯಗಳು ಬಂದಿದೆ. ಸ್ವತಂತ್ರವಾಗಿ ಆರಿಸಿ ಬಂದಿರುವ ಸದಸ್ಯರು ಅದರ ಇಚ್ಛೆಗೆ ಅನುಗುಣವಾಗಿ ಯಾವುದಾದರೂ ಒಂದು ಪಕ್ಷಕ್ಕೆ ಸೇರಲು ಅವಕಾಶ ಮಾಡಿಕೊಟ್ಟರೆ, ಅದು ಈಗ ನಾವು ತಂದಿರುವ ತಿದ್ದುಪಡಿ ಮಸೂದೆಯ ಮೂಲ ತತ್ವಕ್ಕೆ ಅನುಗುಣವಾಗಿರುವುದಿಲ್ಲ ನಾವು ಒಂದು ರೀತಿಯ ವಾದವಾಗಿದ್ದರೆ ಮತ್ತೊಂದು ಪಾದ ಏನಿದೆ ಎಂದರೆ, ಈ ರೀತಿ ಸ್ವತಂತ್ರವಾಗಿ ಆಯ್ಕೆ ಆದವರು ಒಂದು ಸಲ ನಮಗೆ ಸಪೋರ್ಟ್ ಮಾಡಬಹುದು, ಮತ್ತೊಂದು ಸಲ ನಿಮಗೆ ಸಪೋರ್ಟ್ ಮಾಡಬಹುದು ಹೀಗೆ ಸಮಯಕ್ಕೆ ಅನುಗುಣವಾಗಿ ತನ್ನ ಬಲವನ್ನು ಬದಲಾವಣೆ ಮಾಡಿಕೊಳ್ಳಬಹುದು. ಆದ್ದರಿಂದ ಇಂತಹವರು ಯಾವುದಾದರೂ

ಒಂದು ರಾಜಕೀಯ ಪಕ್ಷ ಸೇರಲು ಅವಕಾಶವಿರಬೇಕು ಎಂಬುದು. ಈ ಒಂದು ವಾದದಲ್ಲಿ ಸಾಸ್ವವಾಂಶ ಇದೆ. ಇದರ ಜೊತೆಗೆ ಸ್ವತಂತ್ರವಾಗಿ ಮತದಾರರಿಂದ ಆಯ್ಕೆ ಆದವರು ಸ್ವತಂತ್ರವಾಗಿಯೇ ಉಳಿಯಬೇಕು, ಇದಕ್ಕೆ ವಿರುದ್ಧವಾದಂಥ ನಿರ್ಣಯವನ್ನು ಇಲ್ಲಿ ತೆಗೆದುಕೊಳ್ಳಬಾರದು ಎಂಬ ವಾದ ಸಹ ಬಂದಿದೆ. ಹೀಗೆ ಇಲ್ಲಿ ಎರಡು ಮೂರು ರೀತಿಯ ವಾದಗಳು ಬಂದಿರುವುದರಿಂದ ಮಾನ್ಯ ಕೊಟ್ರಪ್ಪನವರು ಈಗ ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈ ಬಗ್ಗೆ ಮಾನ್ಯ ಕೊಟ್ರಪ್ಪನವರು ಒತ್ತಾಯ ಮಾಡುವುದು ಬೇಡ. ಬಗ್ಗೆ ಬೇಕಾದರೆ ಈ ಸದನದ ಎಲ್ಲಾ ಸದಸ್ಯರು ಕುಳಿತು ವಿಚಾರ ಮಾಡಿ ಆಗತ್ಯವಿದ್ದರೆ ನಂತರ ತಿದ್ದುಪಡಿ ತರೋಣ. ಆದರೆ ಈಗ ತಮ್ಮ ತಿದ್ದುಪಡಿಯನ್ನು ವಾಪಸ್ ಪಡೆಯಬೇಕೆಂದು ತಮ್ಮ ಮೂಲಕ ಅವರಿಗೆ ಸಲಹೆ ಮಾಡುತ್ತೇನೆ.

ಶ್ರೀ ಬಿ.ಜಿ. ಕೊಟ್ರಪ್ಪ.—ಮಾನ್ಯ ಮಂತ್ರಿಗಳು ಇದು ಸೂಕ್ಷ್ಮವಾಗಿದೆ ಎಂದು ಒಪ್ಪಿಕೊಂಡಿರುವುದರಿಂದ ಮತ್ತು ಮುಂದೆ ಈ ಬಗ್ಗೆ ತಿದ್ದುಪಡಿ ತರುವುದಾಗಿ ಅಶ್ವಾಸನೆ ಕೊಟ್ಟಿರುವುದರಿಂದ ಹಾಗೂ ಈ ಮನೆಯ ಎಲ್ಲಾ ಸದಸ್ಯರ ಅಭಿಪ್ರಾಯವೂ ಇದೇ ರೀತಿ ಇರುವುದರಿಂದ ನಾನು ಈ ತಿದುಪ್ಪಡಿಯ ಬಗ್ಗೆ ಒತ್ತಾಯ ಮಾಡದೆ ಇದನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಗೆ ಅವರ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಲು ಅನುಮತಿ ನೀಡಬಹುದೇ ?

ಮಾನ್ಯ ಸದಸ್ಯರು.—ಹೌದು.

(ಸಭೆಯು ಮಾನ್ಯ ಕೊಟ್ರಪ್ಪನವರಿಗೆ ಅವರ ತಿದ್ದುಪಡಿಯನ್ನು ವಾಪಸ್ ಪಡೆಯಲು ಅನುಮತಿ ನೀಡಿತು)

ಅಧ್ಯಕ್ಷರು.—ಈಗ ಖಿನೇ ಖಂಡವನ್ನು ಮತಕ್ಕೆ ಹಾಕುತ್ತೇನೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 3 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

Clause No. 4

MR. SPEAKER.—Sri M. Veerappa Moily and Sri Mallikarjun M.Kharge to move the is amendments.

SRI M. MALLIKARJUN KHARGE.—Sir, I beg to move the following amendment.—

(1) In the Clause (4) (1) after "Zilla Parishad" substitute the wards to the Adhyaksha of Zilla Parishad and delete "to the Chief Secretary to Government".

(2) In the Clause 4 (2) after "Muncipal Corporation" substitute the words "Mayor" and delete "to the Divisional Commissioner".

(3) In the Clause 4 (3) after "Town Muncipal Council" substitute the words "to the President of Town Muncipal Council" and delete "to the Deputy Commissioner".

(4) In the Clause 4 (4) after "Mandal Panchayat" substitute the words "to the Pradhan" and delete "to the Chief Secretary to the Zilla Prishads."

(5) After the words "reference" add "after giving proper opprtunity to the respective Member or Councillor or the political party" and before the words "and".

The Question was Proposed

ಶ್ರೀ ಎಂ. ಮಲ್ಲಿಕಾರ್ಜುನ ಬಾರ್ಗೆ.—ಸ್ಪೀಕರ್ ಸರ್, ನಾಲ್ಕನೆ ಸೆಕ್ಷನ್‌ಗೆ ನಾವು ತಿದ್ದುಪಡಿ ತರಬೇಕೆಂಬ ಉದ್ದೇಶ ಏನೆಂದರೆ, ಚುನಾಯಿತ ಸದಸ್ಯರು ಏನಿದ್ದಾರೆ, ಇವರನ್ನು ಡಿಸ್‌ಕ್ವಾಲಿಫೈ ಮಾಡಬೇಕಾದರೆ, ಈ ಬಗ್ಗೆ ನಿರ್ಣಯ ಕೈಗೊಳ್ಳುವವರು ಯಾರು ?

> "Where a complaint of defection is received from a member or councillor or a political party by the Chief Executive Officer of the concerned Local Authority, he shall, within twenty-four hours from the receipt of such complaint, refere the same for decision to,—
> (1) in the case of Zilla Prishad, to the Chief Secretary to Government".....

ಎಂದರೆ, ಜಿಲ್ಲಾ ಪರಿಷತ್ತಿನ ಸದಸ್ಯರು ಯಾರಿದ್ದಾರೆ, ಅವರಲ್ಲಿ ಯಾರಾದರೂ ಯಾವುದಾದರೂ ಒಂದು ಕಾರಣಕ್ಕಾಗಿ ಡಿಸ್‌ಕ್ವಾಲಿಫೈಡ್ ಆಗಿದ್ದಾರೆ ಅಥವಾ ಇಲ್ಲ ಎಂಬುದನ್ನು ತೀರ್ಮಾನ ಮಾಡಿ ನಿರ್ಣಯ ಕೊಡ ಶಕ್ತಿಯಂಥ ಒಂದು ಅಧಿಕಾರವನ್ನು ಅಲ್ಲಿನ ಚೀಫ್ ಸೆಕ್ರಟರಿ ಅವರಿಗೆ ಕೊಟ್ಟಿದ್ದೀರಿ. ಈ ಒಂದು ಅಧಿಕಾರವನ್ನು ಇವರಿಗೆ ಬದಲು ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ಕೊಡಬೇಕೆಂಬುದು ನಮ್ಮ ವಾದ. ಈಗ ವಿಧಾನಸಭೆ ಸದಸ್ಯರ ಪೈಕಿ ಯಾರಾದರೂ ಡಿಸ್-ಕ್ವಾಲಿಫೈಡ್ ಇದ್ದಾರೋ ಅಥವಾ ಇಲ್ಲವೋ ಎಂಬುದನ್ನು ತೀರ್ಮಾನ ಮಾಡುವವರು ಈ ಮನೆಯ ಅಧ್ಯಕ್ಷರು. ಆದಕಾರಣ ಇಲ್ಲಿ ಕೂಡ ಈ ಒಂದು ಅಧಿಕಾರವನ್ನು ಅಧಿಕಾರೇತರರಿಗೆ ಕೊಡಬೇಕು. ಚೀಫ್-ಸೆಕ್ರೆಟರಿ ಅವರಿಗೆ ಈ ಅಧಿಕಾರ ಕೊಟ್ಟರೆ, ಅವರು ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬಹುದು. ಆಡಳಿತ ಪಕ್ಷದಲ್ಲಿರುವವರು ತಮ್ಮ ಒಂದು ಪ್ರಭಾವವನ್ನು ಅಲ್ಲಿನ ಚೀಫ್-ಸೆಕ್ರೆಟರಿ ಅವರ ಮೇಲೆ ಬೀರಲು ಸಾಧ್ಯವಿದೆ. ಈಗಾಗಲೇ ಇಂತಹ ಪ್ರಕರಣಗಳು ನಡೆದಿವೆ. ಮೊನ್ನೆ ನಡೆದ ಚುನಾವಣೆಗೆ ನಾಮಿನೇಷನ್ ಫೈಲ್ ಮಾಡುವ ಸಂದರ್ಭದಲ್ಲಿ, ನಾಮಪತ್ರಗಳನ್ನು ಸ್ಕ್ರುಟಿನಿ ಮಾಡುವ ಸಂದರ್ಭದಲ್ಲಿ, ನಾಮಪತ್ರಗಳನ್ನು ವಿತ್‌ಡ್ರಾ ಮಾಡುವ ಸಂದರ್ಭದಲ್ಲಿ ಅಲ್ಲಿನ ರಿಟರ್ನಿಂಗ್ ಆಫೀಸರ್‌ಗಳ ಮೇಲೆ ಸ್ಥಳೀಯ ಮುಖಂಡರುಗಳು ತಮ್ಮ ಪ್ರಭಾವ ಬೀರಿದ್ದಾರೆ. ಈ ರೀತಿ ಸ್ಥಳೀಯ ಮುಖಂಡರ ಒತ್ತಡಕ್ಕೆ ಬಿಳಗಾದ ಅಧಿಕಾರಿಗಳು ಅವರು ಹೇಳಿದಂತೆ ಕೇಳಿದ್ದಾರೆ. ಕೆಲವು ಕಡೆಗಳಲ್ಲಿ ನಾಮಪತ್ರಗಳನ್ನು ಅಂಗೀಕಾರ ಮಾಡಿದ್ದಾರೆ ಮತ್ತೆ ಕೆಲವು ಕಡೆ ರಿಜೆಕ್ಟ್ ಮಾಡಿದ್ದಾರೆ. ಆದ್ದರಿಂದ ನಾಳೆಯೂ ಸಹ ಇದೇ ಪ್ರಶ್ನೆ ಬರುತ್ತದೆ. ಸದಸ್ಯರನ್ನು ಡಿಸ್-ಕ್ವಾಲಿಫೈ ಮಾಡಬೇಕು ಎಂಬುದು ಆಡಳಿತಪಕ್ಷದ ಕಡೆಯವರಿಗೆ ಬಂದರೆ, ಅಲ್ಲಿನ ಚೀಫ್-ಸೆಕ್ರೆಟರಿ ಅವರಿಗೆ ಕ್ಷುಲ್ಲಕ ಕಾರಣಗಳನ್ನು ಕೊಟ್ಟು, ಅವರ ಮೇಲೆ ಒತ್ತಡ ತಂದು ಈ ಒಂದು ಕೆಲಸವನ್ನು ಮಾಡುತ್ತಾರೆ. ಯಾವುದಾವ ಕಾರಣಕ್ಕಾಗಿ ಡಿಸ್-ಕ್ವಾಲಿಫೈ ಮಾಡಬಹುದು ಎಂಬುದು ಇಲ್ಲಿ ಸೆಕ್ಷನ್ ೩ರಲ್ಲಿ ಹೇಳಿದೆ. ಸೆಕ್ಷನ್ ೪ರಲ್ಲಿ ಚೀಫ್ ಸೆಕ್ರೆಟರಿಯವರಿಗೆ ಅಧಿಕಾರ ಕೊಟ್ಟಿದ್ದೀರಿ, ಅದನ್ನು ಜಿಲ್ಲಾ ಪರಿಷತ್ ಅಧ್ಯಕ್ಷರಿಗೆ ಕೊಡಿ ಎಂದು ಕೇಳುತ್ತಾ ಇದ್ದೇವೆ. ಅವರು ನಾನ್ ಅಫಿಷಿಯಲ್ಸ್ ಇರುತ್ತಾರೆ. ಯಾವುದೇ ಪಾರ್ಟಿ ಇರಬಹುದು. ಇವೊತ್ತಿನದಿವಸ ನಮ್ಮ ಪಾರ್ಟಿಯವರೇ ಹೆಚ್ಚಾಗಿ ಆರಿಸಿ ಬಂದಿದ್ದಾರೆ. ಈ ಅಧಿಕಾರವನ್ನು ನಾನ್ ಅಫಿಷಿಯಲ್ಸ್‌ಗೆ ಏಕೆ ಕೊಡಬಾರದು. ನಮ್ಮ ಉದ್ದೇಶ ಇಷ್ಟೆ. ನಾನ್ ಅಫಿಷಿಯಲ್ಸ್‌ನ್ನು ಡಿಸ್‌ಕ್ವಾಲಿಫೈ ಮಾಡಬೇಕಾದರೆ ನಾನ್ ಅಫಿಷಿಯಲ್ಸ್ ಇರಬೇಕು ಎನ್ನುವುದು ನಮ್ಮ ವಾದ. ಇದು ಸೂಕ್ತ ಕೂಡ. ಈಗ ಸೆಕ್ಷನ್ ೪ರಲ್ಲಿ ಜಿಲ್ಲಾಪರಿಷತ್ತಿನದು ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ, ಮುನಿಸಿಪಲ್ ಕಾರ್ಪೊರೇಷನ್ ವಿಭಾಗೀಯ ಕಮೀಷನರು ನಗರ ಅಥವಾ ಪಟ್ಟಣಮುನಿಸಿಪಲ್ ಕೌನ್ಸಿಲ್‌ಗೆ ಡೆಪ್ಯುಟಿ ಕಮೀಷನರ್, ಮುಂಡಲ್ ಪಂಚಾಯತಿಯಿದ್ದರೆ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಅಧಿಕಾರ ಬರುತ್ತದೆ. ಇವರಿಗೆ ಅಧಿಕಾರ ಬರುತ್ತದೆ. ಇವರಿಗೆ ಅಧಿಕಾರ ಕೊಡುವುದಕ್ಕಿಂತ ಎಲೆಕ್ಟೆಡ್ ರೆಪ್ರೆಸೆಂಟೇಟಿವ್ಸ್ ಏನು ಇರುತ್ತಾರೆ ಅವರಿಗೆ ಕೊಡಬೇಕು, ಅವರಿಗೆ ಗೌರವ ಕೊಡುತ್ತದೆ. ಯಾರು

ಎನ್ನುವುದು. ನೀವು ಜನರ ಕೈಯಲ್ಲಿ ಅಧಿಕಾರ ಕೊಡಬೇಕು, ಪ್ರಜಾಪ್ರಭುತ್ವದ ಪ್ರಕಾರ ಆಡಳಿತ ನಡೆಸತಕ್ಕಂಥಾದ್ದು ಎಲೆಕ್ಟೆಡ್ ಬಾಡಿ ಕೈಯಲ್ಲಿದೆ ಅಂದಾಗ, ನಾನ್ ಆಫೀಷಿಯಲ್ಸ್‌ನು ಡಿಸ್‌ಕ್ವಾಲಿಫೈ ಮಾಡತಕ್ಕಂಥ ಅಧಿಕಾರವನ್ನು ಅಧಿಕಾರಿಗಳಿಗೆ ಏಕೆ ಕೊಡುತ್ತೀರಿ ? ಸಾವಿರಾರು ಜನ ಎಲೆಕ್ಟೆಡ್ ಆದವರು ಇದ್ದಾರೆ, ಅಂತಹ ಪ್ರತಿನಿಧಿಗಳನ್ನು ಡಿಸ್‌ಕ್ವಾಲಿಫೈ ಮಾಡತಕ್ಕಂಥಾದ್ದನ್ನು ಅಧಿಕಾರಿಗಳ ಕೈಯಲ್ಲಿ ಕೊಡುವುದು ನ್ಯಾಯವಲ್ಲ. ಅದಕ್ಕೋಸ್ಕರ ನಾವು ಅಮೆಂಡ್‌ಮೆಂಟ್ ತಂದಿದ್ದೇವೆ. ಇದನ್ನು ಒಪ್ಪಿಕೊಳ್ಳಿ. ಇದರಲ್ಲಿ ಏನೂ ಕಾಂಪ್ಲಿಕೇಷನ್ ಇಲ್ಲ, ಎಕ್ಸ್‌ಪೆಂಡಿಚರ್ ಇಲ್ಲ, ಪ್ರಿಸ್ಟೀಜ್ ಪ್ರಶ್ನೆ ಇಲ್ಲ. ನಾವು ೪ ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇವೆ, ಇವು ಸಮಂಜಸವಾಗಿದೆ. ಮಾನ್ಯ ನಜೀರ್ ಸಾಬ್‌ರವರು ಒಪ್ಪಿಕೊಳ್ಳುತ್ತಾರೆ, ಅವರು ಏನಾದ ಮಾಡುವುದಿಲ್ಲ ಎಂದು ನನಗನ್ನಿಸುತ್ತದೆ.

ಅಧ್ಯಕ್ಷರು.—ಮಾನ್ಯ ನಜೀರ್‌ಸಾಬ್‌ರವರೇ ಈಗ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ನನಗೆ ಒಂದು ನಿಮಿಷ ಅವಕಾಶಕೊಡಿ.

ಅಧ್ಯಕ್ಷರು.—ಹಿಂದೆ ನಿಮ್ಮನ್ನು ಕರೆದಿದ್ದೇನೆ, ಆಗ ನೀವು ಸಭೆಯಲ್ಲಿರಲಿಲ್ಲ. ಟ್ರೈನ್ ಮಿಸ್ ಆಗಿದೆ, ಗಾಡಿಯನ್ನು ಹಿಂದಕ್ಕೆ ತರುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೆ, ಈಗ ನಮ್ಮ ಉಪ ನಾಯಕರು ಮತ್ತು ನಾನು ಇಬ್ಬರೂ ಕೂಡ ಒಂದು ಸಿದ್ಧಾಂತದ ಮೇಲೆ ಈ ತಿದ್ದುಪಡಿಯನ್ನು ಕೊಟ್ಟಿದ್ದೇವೆ. ಏಕೆಂದರೆ, ರಾಜಕೀಯ ಪಕ್ಷಾಂತರದ ನಿರ್ಣಯ ಮಾಡಲಿಕ್ಕೆ ಅಧಿಕಾರಿಗಳ ಹತ್ತಿರ ಕೊಡತಕ್ಕಂಥಾದ್ದು ಸರಿ ಇಲ್ಲ. ಏಕೆಂದರೆ ತಮ್ಮ ಮೂಲ ಸಿದ್ಧಾಂತಕ್ಕೂ ಅದು ವಿರೋಧ. ಏಕೆಂದರೆ ಜನತೆಯ ಕೈಗೆ ಅಧಿಕಾರ ಕೊಡಬೇಕು ಎನ್ನುವುದು ನಿಮ್ಮ ಮೂಲ ತಿರುಳು. ಆ ಉದ್ದೇಶದಿಂದ ಜಿಲ್ಲಾಪರಿಷತ್. ಮಂಡಲ್ ಪಂಚಾಯತ್ ಮಾಡಿದ್ದು. ತಮ್ಮ ಮಸೂದೆಯಲ್ಲಿದೆ. ಹಾಗಿರತಕ್ಕ ಸಂದರ್ಭದಲ್ಲಿ ಪಕ್ಷಾಂತರ ಮಸೂದೆಯ ಮೂಲಕ ಈ ಕಾನೂನು ತಂದು, ಆವನ್ನು ಅಧಿಕಾರಿಗಳ ಕೈಗೆ ಕೊಡತಕ್ಕ ಕೆಲಸ ಏತಕ್ಕೆ ಮಾಡಬೇಕು ? ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯ್ತಿ ಅಧ್ಯಕ್ಷರಾಗಿ ಕಾಂಗ್ರೆಸ್‌ನವರು ಇರಬಹುದು, ಜನತಾದವರೂ ಇರಬಹುದು ಬಿ.ಜೆ.ಪಿ.ನವರು ಇರಬಹುದು, ಕಮ್ಯೂನಿಸ್ಟ್‌ನವರು ಇರಬಹುದು. ಜನತೆಯಿಂದ ಚುನಾಯಿತರಾದವರಿಗೆ ಏತಕ್ಕೆ ಗೌರವ ಕೊಡಬಾರದು ? ಅವರಬಗ್ಗೆ ನಿಮಗೆ ಅಪನಂಬಿಕೆ ಇದೆಯೆ ? ಪಕ್ಷಾಂತರ ವಿಚಾರದಲ್ಲಿ ರಾಜಕಾರಣಿಗಳನ್ನು ನಂಬುವುದಕ್ಕೆ ಆಗುವುದಿಲ್ಲ, ಆವರಿಗೆ ಯಾವ ಮೌಲ್ಯಗಳೂ ಇಲ್ಲವೆಂದು ಭಾವಿಸುತ್ತೀರಾ ? ಅಧಿಕಾರಿಗಳ ಕೈಗೆ ಈ ಅಧಿಕಾರವನ್ನು ಕೊಟ್ಟರೆ ಸರಿಯಾಗುತ್ತದೆನ್ನುವ ವಾದವನ್ನು ತಾವು ಇಡುವುದಾದರೆ, ಅದು ಪ್ರತ್ಯೇಕ. ಚುನಾಯಿತ ಸದಸ್ಯರ ಮೇಲೆ ಅಪನಂಬಿಕೆ ಏತಕ್ಕೆ ? ಮಂಡಲ ಮತ್ತು ಜಿಲ್ಲಾ ಪರಿಷತ್ತಿನ ಅಧ್ಯಕ್ಷರುಗಳು ತೀರ್ಮಾನ ಮಾಡಿ ಎಲ್ಲೋ ಹೋಗಿ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ನಿಗದಿತ ವಾಯಿದೆಯೊಳಗೆ ತೀರ್ಪು ಕೊಡದಿದ್ದರೆ, ಕೊಟ್ಟಂತಹ ತೀರ್ಪಿನಲ್ಲಿ ತಪ್ಪು ಇದ್ದರೆ, ಅದನ್ನು ಜನರ ಎದುರಿಗೆ ಇಡಬೇಕು, ಮಂಡಲ್ ಮತ್ತು ಜಿಲ್ಲಾ ಪರಿಷತ್ತಿಗೆ ಉತ್ತರ ಕೊಡಬೇಕು. ಅದನ್ನು ಒಪ್ಪುವ ಮೊದಲು, ತೀರ್ಮಾನ ಮಾಡುವ ಮೊದಲು ಸಂಬಂಧಪಟ್ಟ ಮಂಡಲ ಹಾಗೂ ಜಿಲ್ಲಾ ಪರಿಷತ್ ಹಾಗೂ ಮುನಿಸಿಪಲ್ ಕೌನ್ಸಿಲರುಗಳ ಜೊತೆ ಸಮಾಲೋಚನೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೇವೆ. ತಾವು ತಂದಿರುವ ಮಸೂದೆಯಲ್ಲಿ ಕೌನ್ಸಿಲರುಗಳನ್ನು, ಜಿಲ್ಲಾ ಮತ್ತು ಮಂಡಲ್ ಪಂಚಾಯ್ತಿ ಸದಸ್ಯರುಗಳನ್ನು ಕೇಳುವುದಕ್ಕೆ ಅವಕಾಶ ಇಲ್ಲ. ನೇರವಾಗಿ ಅಧಿಕಾರಿ ತಪ್ಪೋ ನೆಪ್ಪೋ ನಿರ್ಣಯ ಮಾಡತಕ್ಕ ಪರಮಾಧಿಕಾರಿಅವರಿಗೆ ಕೊಟ್ಟಿದ್ದೀರಿ. ಇದು ಅಂತಿಮ ಎಂದು ಒಂದು ಕಡೆ ಬೇರೆ ಹೇಳಿದ್ದೀರಿ. ಕೊನೆಯದಾಗಿ ಪರಮಾಧಿಕಾರ ತಪ್ಪಾಗಿದ್ದರೂ ಕೂಡ ಸರಿಯೆಂದು ಒಪ್ಪಿಕೊಳ್ಳಬೇಕು. ಕೋರ್ಟ್‌ನಲ್ಲಿ ದಾವೆ ಕೂಡ ಮಾಡಕೂಡದು. ಇದನ್ನು ಪ್ರತ್ಯೇಕವಾಗಿ ಕೊಟ್ಟಿದ್ದೀರಿ. ಇಷ್ಟು ಅಧಿಕಾರವನ್ನು ಅಧಿಕಾರಿಗಳಿಗೆ ಕೊಡತಕ್ಕಂಥ ಅವಶ್ಯಕತೆಯಾದರೂ ಏನಿತ್ತು ? ಜನತೆಯ ಕೈಗೆ ಅಧಿಕಾರವನ್ನು ಕೊಡುತ್ತೇವೆಂದು ಹೇಳಿ ತರ್ಕಬದ್ಧವಾದ ವಿಚಾರವನ್ನು ಮಾನ್ಯ ಸಚಿವರು ಏತಕ್ಕೆ ಅನುಸರಿಸಿದ್ದಾರೋ ನನಗಂತೂ ಅರ್ಥವಾಗುತ್ತಿಲ್ಲ ಅಧಿಕಾರಿಗಳ ಕೈಗೆ ಅಧಿಕಾರ ಕೊಟ್ಟರೆ ನ್ಯಾಯ ಸಿಗುತ್ತದೆ, ಜನತೆಯ ಪ್ರತಿನಿಧಿಗಳ ಕೈಗೆ ಕೊಟ್ಟರೆ ನ್ಯಾಯ ಸಿಗುವುದಿಲ್ಲ ಎನ್ನುವ ವಾದವನ್ನು ನಾವು ಇಲ್ಲಿ ಕುಳಿತುಕೊಂಡು ಮಾಡುವುದಕ್ಕಾಗುವುದಿಲ್ಲ. ಆ ವಾದ ಇದ್ದರೆ ಬೇರೆ ಆದರೆ, ಇಂಥ ಒಂದು ವ್ಯವಸ್ಥೆ ಎಲ್ಲಿಯೂ ಕೂಡ ಇಲ್ಲ. ತಾವು ಆಲೋಚನೆ ಮಾಡಿ, ನಾವು ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದು ಒಳ್ಳೆಯದು. ಇವತ್ತು ಅನೇಕ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿಗಳ ಅಧ್ಯಕ್ಷರುಗಳು ನಿಮ್ಮ ಪಕ್ಷದವರೇ ಆಗುತ್ತಾರೆ. ಇದು ತಿಳಿದೂನಾವು ಇಂಥ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಇದರ ತಾತ್ವಿಕ ಹಿನ್ನಲೆ ಜನತಾ ಪ್ರತಿನಿಧಿಗಳ ಕೈಗೆ ಹೆಚ್ಚು ಅಧಿಕಾರ ಕೊಡಬೇಕು. ಜನರಿಗೆ ಹೆಚ್ಚು ಅಧಿಕಾರ ಇರಬೇಕೇ ಹೊರತು ಅಧಿ

ಕಾರಿಗಳಿಗಲ್ಲ ಎನ್ನುವ ಮೂಲ ವಿಚಾರವನ್ನು ಮನದಟ್ಟುಮಾಡಿಕೊಡುವುದಕ್ಕೆ ಈ ತಿದ್ದುಪಡಿಯನ್ನು ಕೊಟ್ಟಿದ್ದೇವೆ ಇದನ್ನು ಒಪ್ಪಿಕೊಳ್ಳುವುದು ಸಾಧು ಎಂದು ಹೇಳುತ್ತೇವೆ. ಅಧಿಕಾರಿಗಳ ಕೈಗೆ ಅಧಿಕಾರ ಕೊಡುವುದರಿಂದ ದೊಡ್ಡ ಕಳಂಕ ಬರುತ್ತದೆ. ಜನತಾ ಪ್ರತಿನಿಧಿಗಳಾದ ನಾವು ಇಂಥ ಪಾಪದ ಕೆಲಸದಲ್ಲಿ ಬಾಗಿಯಾಗುವುದಿಲ್ಲವೆಂದು ಈ ತಿದ್ದುಪಡಿಯನ್ನು ತಂದಿದ್ದೇವೆ. ಸರ್ಕಾರ ಇದನ್ನು ಒಪ್ಪಿಕೊಳ್ಳುವುದು ಒಳ್ಳೆಯದೆಂದು ಹೇಳಿ ನನ್ನ ಪಾತಿನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸನ್ಮಾನ್ಯ ಅಧ್ಯಕ್ಷರೇ ನಾನು ಇದು ಸಮಯಕ್ಕೆ ಸರಿಯಾಗಿ ಬರುವುದಿಲ್ಲ ಎಂದು ಆಲೋಚನೆ ಮಾಡಿ ರಾಜು ಮಾಡಲಿಲ್ಲ ಆದರೂ ನಾನು ಮಾತನಾಡಬೇಕೆಂದು ಎದ್ದು ನಿಂತಿದ್ದೇನೆ.

ಅಧ್ಯಕ್ಷರು.—ಈಗ ತಿದ್ದುಪಡಿ ಇರುವುದು ಏನೆಂದರೆ, ಡಿಸ್‌ಕ್ವಾಲಿಫೈ ಮಾಡುವ ಅಧಿಕಾರ ಅಧಿಕಾರಿಗಳಿಗೆ ಬೇಡ ಅಧಿಕಾರೇತರಿಗೆ ಇರಬೇಕೆಂದು ನೀವು ಕಳುಹಿಸಿದ್ದುದು ಮುಗಿದು ಹೋಯಿತು.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಅಬ್ದುಲ್ ನಜೀರ್‌ಸಾಬ್ ಅವರು ನಿಮ್ಮ ಅಧಿಕಾರ ನಿಮಗೆ ಎಂದು ಕೈ ಚಾಚಿ ಹೇಳಿದ್ದನ್ನು ಕೇಳಿದ್ದೇನೆ. ಈಗ ಅಸೆಂಬ್ಲಿ ಚುನಾವಣೆ ಆಗುತ್ತದೆ, ಆದರಲ್ಲಿ ಅಧ್ಯಕ್ಷರು ಪ್ರಮುಖರು, ನಾವು ಏನಾದರೂ ರಾಜೀನಾಮೆ ಕೊಟ್ಟರೆ, ಅದು ನಿಮ್ಮ ಕಡೆಗೆ ಕೊಟ್ಟರೆ ಆಗುತ್ತದೆ, ತಾವು ಪರಿಶೀಲನೆ ಮಾಡುತ್ತೀರಿ, ಅದಕ್ಕೆ ಕೃಪು ಇದೆ ಆದರಂತೆ ನಡೆದುಕೊಳ್ಳುತ್ತೀರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅಧ್ಯಕ್ಷರಾದರೂ ಸಂದರ್ಭಾನುಸಾರ ವಾಪಸ್ಸು ಕೊಡಲಿಕ್ಕೆ ಸಾಧ್ಯ, ಆಫೀಸರ್ ಆದರೆ ಕೊಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಒಂದು ಕ್ರಮವನ್ನು ಅನುಸರಿಸಿ ತೀರ್ಮಾನ ತೆಗೆದುಕೊಳ್ಳುತ್ತೀರಿ. ಈಗ ಏನಾಗಿದೆ. ಎಲ್ಲವನ್ನೂ ಕೂಡ ಜನರು, ಜನರು ಎಂದು ಜನರ ಹೆಸರು ಹೇಳಿ ಈಗ ಮುನೂದೆ ತಂದು ಅಧಿಕಾರಿಗಳ ವಶಕ್ಕೆ ಅಧಿಕಾರ ಕೊಡತಕ್ಕದ್ದು ಸರಿಯೇ, ತಪ್ಪೇ ಎನ್ನುವ ವಿಷಯ ಇಪ್ಪೋತ್ತು ಇದೆ. ಜನರಿಂದ ಆಯ್ಕೆಯಾಗಿ ಬಂಂಥ ಪ್ರತಿನಿಧಿಗಳಿಗೆ ವಿವೇಚನೆ ಇಲ್ಲ ಎಂದು ಕಾಣಿಸುತ್ತದೆ. ಅವರಿಗೆ ಯೋಚನೆ ಮಾಡತಕ್ಕದ್ದು ಅವರಿಗೆ ಆಗುವುದಿಲ್ಲ ಎನ್ನತಕ್ಕದ್ದು ಒಂದು ಇನ್ನೊಂದು ಪಾರ್ಟಿ ಹಿನ್ನೆಲೆಯಲ್ಲಿ ಅವರ ಸ್ವಾರ್ಥ ತೀರ್ಮಾನ ತೆಗೆದುಕೊಳ್ಳಬಹುದು ಎನ್ನುವುದು ಇನ್ನೊಂದು. ನಾನು ತಪ್ಪಾಗಿ ಹೇಳುತ್ತೇನೆ, ನೀವು ನಂಬಿದವರು, ಪೂರ್ಣ ನಂಬಿ, ಜನರನ್ನು ಅರ್ಧಂಬರ್ಧ ನಂಬುವುದು ಸಾಧ್ಯವಿಲ್ಲ. ನಾವು ಅಸೆಂಬ್ಲಿ ಅಧ್ಯಕ್ಷರಿಗೆ ಪೂರ್ಣ ಅಧಿಕಾರಕೊಟ್ಟು ಕೆಲಸವನ್ನು ನಿರ್ವಹಿಸುತ್ತಿದ್ದೇವೆ. ನಾವು ಅವರಿಗೆ ನಂಬಿದ್ದೇವೆ. ಅದೇ ರೀತಿ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ನಲ್ಲಿ ಜನತಾ ಪ್ರತಿನಿಧಿಗಳ ಅಧ್ಯಕ್ಷರು ಮತ್ತು ಪ್ರಧಾನರ ಆಯ್ಕೆ ಆಗುತ್ತದೆ. ಇವೊತ್ತು ಮುನಿಸಿಪಾಲಿಟಿಗಳಲ್ಲಿ ಅಧ್ಯಕ್ಷರು ಇದ್ದಾರೆ. ಅದೇ ರೀತಿ ಕಾರ್ಪೊರೇಷನ್‌ಗಳಲ್ಲಿ ಮೇಯರ್‌ರವರು ಇದ್ದಾರೆ, ಅವರಿಗೆ ಅಧಿಕಾರ ಕೊಡತಕ್ಕದ್ದು ಸರಿಯಾದ ಕ್ರಮ ಎಂದು ಅನುಸರಿಸಿ ನಾವು ಅದೇ ರೀತಿ ತಿದ್ದುಪಡಿ ಕೊಟ್ಟಿದ್ದೇವೆ. ಅವರಿಗೆ ಕೇಳಿ ತೀರ್ಮಾನ ತೆಗೆದುಕೊಳ್ಳಿ ಎಂದು ನಾವು ಮಾಡಿದರೂ ಸಹ ಅವರು ಒಂದು ಜಡ್ಜ್‌ಮೆಂಟ್ ಬರೆಯಬೇಕಾಗುತ್ತದೆ ಪರ, ವಿರೋಧ ತೀರ್ಪು ಕೊಡಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಹೇಳಬೇಕೆಂದರೆ, ಅಧಿಕಾರಿಗಳನ್ನು ನಂಬತಕ್ಕ ಕಾಲ ಹಿಂದೆ ಆಗಿದೆ. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಎಷ್ಟು ವರ್ಷ ಆಯಿತು. ಅಲ್ಲಿಂದ ನಾವು ಅಧಿಕಾರಿಗಳಿಂದ ಕೆಲಸ ಮಾಡಿಸಿದ್ದೇವೆ. ನಾವು ಜನತೆಯಾ ಪ್ರತಿನಿಧಿಗಳಾಗಿ ಒಂದಿದ್ದೇವೆ, ಮಂತ್ರಿಮಂಡಲ ಮಾಡಿದ್ದೇವೆ. ಹಾಗೆಯೇ ನಾವು ಮನೆಗೆ ಹೋಗಿದ್ದೇವೆ. ಅಧಿಕಾರಿಗಳು ಮಾತ್ರ ಹಾಗೆಯೇ ಇದ್ದಾರೆ. ಅದು ಶಾಶ್ವತವಾಗಿ ಇರತಕ್ಕ ಯಂತ್ರ. ಅದು ಇರಲೇ ಬೇಕು. ಅಧಿಕಾರಿಗಳು ಯಾವ ರೀತಿಯಾಗಿ ವರ್ತನೆ ಮಾಡಿದ್ದಾರೆ ಎನ್ನತಕ್ಕ ಬಗ್ಗೆ ಕೂಲಂಕುಷವಾಗಿ ಯೋಚನೆ ಮಾಡಬೇಕು. ಅಧಿಕಾರಿಗಳಲ್ಲಿ ಸ್ವಾರ್ಥದ ವರ್ಗ ಇದೆ. ಕೆಲಸಕ್ಕೆ ಸೇರುವವರೆಗೆ ಅಭ್ಯರ್ಥಿಯಾಗಿರುತ್ತಾರೆ. ಕೆಲಸಕ್ಕೆ ಸೇರಿದ ಮೇಲೆ ಸ್ವಾರ್ಥ ಸಾಧನೆ ಮಾಡತಕ್ಕ ಕೆಲಸ ಮಾಡುತ್ತಾರೆ ಅಧಿಕಾರವರ್ಗ ಸ್ವಾರ್ಥ ಸಾಧನೆಯ ಜಾತಿ ಅವರಿಗೆ ಸಂಬಳ, ಇನ್‌ಕ್ರಿಮೆಂಟ್ ಮಾತ್ರ ಬೇಕು. ಈಗ ವೆಂಕಟಸ್ವಾಮಿ ಕಮೀಷನ್‌ನವರು ಒಂದು ವರದಿಯನ್ನು ಕೊಟ್ಟಿದ್ದಾರೆ. ತಾವು ತೀರ್ಮಾನ ತೆಗೆದುಕೊಂಡಿದ್ದೀರಿ, ಅವರಿಗೆ ೮ ಸಾವಿರ ೧೦ ಸಾವಿರ ೨೦ ಸಾವಿರ ಕೊಡಿ ಅವರು ಹೊಡತಕ್ಕ ಕೆಲಸ ಮಾಡುತ್ತಾರೆ. ಲೋಕಾಯುಕ್ತಯೋಗಿ ಇಲಾಖೆಯಲ್ಲಿ ಏನು ಕೆಲಸ ಮಾಡುತ್ತಾರೆ, ಫುಡ್ ಕಾರ್ಪೊರೇಷನ್ ಇಲಾಖೆಯಲ್ಲಿ ಏನು ಕೆಲಸ ಮಾಡುತ್ತಾರೆ ಎಂದು ಎಲ್ಲರಿಗೂ ಗೊತ್ತಿದೆ ಇದುವರೆಗೂ ಗಾಡ್ಜ್ ಪರ್ಸೆಂಟ್, ೨೦ ಪರ್‌ಸೆಂಟ್ ಕಮಿಷನ್ ಏನು ವಸೂಲು ಮಾಡಂತ್ತಿದ್ದರು ಅದು ಹೊರಟು ಹೋಗಿದೆ ಈಗ ಯಾವುದೇ ಕಂಟ್ರಾಕ್ಟರ್ ಕೇಳಿ ನೋಡಿ ೫೦ ಪರ್‌ಸೆಂಟ್ ಎಂದು ಹೇಳುತ್ತಾರೆ ನಿನಗೆ ೫೦ ಭಾಗ ನನಗೆ ೫೦ ಭಾಗ ಎಂದು ಹೇಳಿ ಕೆಲಸ ನಡೆಯುತ್ತಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಿದ್ದುಪಡಿಗೆ ಸಂಬಂಧಪಟ್ಟಂತೆ ಮಾತನಾಡಬೇಕು.

೨–೩೦ ಪಿ.ಎಂ

ಶ್ರೀ ಬಿ. ಬಸವಲಿಂಗಪ್ಪ.—ತಾವೂ ಲಾಯರ್, ನಾನೂ ಲಾಯರ್. ನಾವೂ ಸಾಕಷ್ಟು ಓದಿದ್ದೇವೆ, ಲಾ ಪ್ರಾಕ್ಟೀಸ್ ಮಾಡಿದ್ದೇವೆ. ಅಧಿಕಾರಿವರ್ಗ ಶಾಶ್ವತವಾದುದು. ನೀವು ರಾಜೀನಾಮೆ ಕೊಟ್ಟಿದ್ದೀರಿ ಇದು ಡಿಸ್‌ಕ್ವಾಲಿಫಿಕೇಷನ್ ಆಗುತ್ತದೆಯೋ ಇಲ್ಲವೋ ನೋಡುತ್ತೇನೆಂದು ಪರ. ವಿರೋಧವಾದ ಮಾಡುವಂಥಾದ್ದೂ ಉಂಟು. ಅಧಿಕಾರಿವರ್ಗದವರು ಎಲ್ಲಾ ರೀತಿಯ ಕೆಲಸವನ್ನೂ ಮಾಡುತ್ತಾರೆ. ಆದರೆ ನಮ್ಮ ಜನರನ್ನು ಈ ಅಧಿಕಾರಿವರ್ಗದವರ ಕೈಗೆ ಕೊಡಬೇಡಿ. ನಮ್ಮ ತಿದ್ದುಪಡಿ ಬಹಳ ಮಹತ್ವವಾದುದು. ಒಳ್ಳೆಯ ಆಲೋಚನೆಯಿಂದಲೇ ನಾವು ಇದನ್ನು ಈ ದಿವಸ ಸಭೆಯ ಮುಂದೆ ತಂದಿದ್ದೇವೆ. ಆದರೆ ವಿರೋಧಪಕ್ಷದವರು ಇದನ್ನು ತಂದಿದ್ದಾರೆಂದು ತಾವು ವಿರೋಧ ಮಾಡುವುದಕ್ಕೆ ಹೋಗಬೇಡಿ. ದಯವಿಟ್ಟು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆಬ್ದುಲ್ ನಜೀರ್‌ಸಾಬ್ (ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—ಮಾನ್ಯ ಸಭಾಧ್ಯಕ್ಷರೆ, ಜನತಂತ್ರ ವ್ಯವಸ್ಥೆಯಲ್ಲಿ ಜನತೆಯ ಹತ್ತಿರವೇ ಅಧಿಕಾರ ಇರಬೇಕು ಅವರಿಗೆ ಪ್ರಾತಿನಿಧ್ಯ ಇರಬೇಕೆಂದು ನೀತಿಯನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ. ಈ ಮೂಲ ಶಾಸನವನ್ನು ಮಾಡಿದ ಮುಖ್ಯ ಉದ್ದೇಶ ತಮಗೆಲ್ಲಾ ತಿಳಿದಿದೆ, ಪಾರ್ಲಿಮೆಂಟಿನಲ್ಲಿ ಅಂದರೆ ಲೋಕಸಭೆಯಲ್ಲಿ ರಾಜ್ಯಸಭೆಯಲ್ಲಿ ನಾವು ನೋಡಿದ್ದೇವೆ ಅಧ್ಯಕ್ಷರಾಗಲಿ ಸಭಾಪತಿಯವರಾಗಲಿ ಎಕ್ಸಿಕ್ಯುಟೀವ್ ಅಥಾರಿಟಿ ಅಲ್ಲ- ಅವರು ಅಧಿಕಾರ ನಡೆಸುತ್ತಿರತಕ್ಕದ್ದು ಇದಕ್ಕೆ ಬದಲಾಗಿ ಆ ಅಧಿಕಾರವನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಅಥವಾ ಪ್ರಧಾನ ಮಂತ್ರಿಗಳಿಗೆ ಕೊಟ್ಟಿದ್ದರೆ ಆದನ್ನು ಪ್ರಶ್ನೆ ಮಾಡಬಹುದಿತ್ತು. ತಾತ್ವಿಕವಾಗಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ, ಮಂಡಲ ಪಂಚಾಯಿತಿಯ ಪ್ರಧಾನ ಒಬ್ಬ ನನ್ನ ವಿರುದ್ಧ ಮತ ಕೊಟ್ಟಿರುತ್ತಾನೆ ಇವತ್ತು ಏನು ಹೇಳುತ್ತಿದ್ದೇವೆ ಯಾವ ವ್ಯಕ್ತಿಯ ವಿರುದ್ಧ ದೂರುಗಳು ಬರುತ್ತವೆ ಅಂಥ ಆ ವ್ಯಕ್ತಿ ಸಭೆಯಲ್ಲಿ ಸದಸ್ಯನಾಗಿ ಇರಬಾರದೆಂದು ಈ ಶಾಸನದಲ್ಲಿ ಕಟ್ಟುಕಟ್ಟಳೆಯನ್ನು ನಾವು ಹಾಕಿದ್ದೇವೆ. ಅಧ್ಯಕ್ಷರಾಗಿರಲಿ ಉಪಾಧ್ಯಕ್ಷರಾಗಿರಲಿ ಅಥವಾ ಸದಸ್ಯರಾಗಿರಲಿ ಅವರ ಸ್ವಹಿತಕ್ಕೆ ಸಂಬಂಧಪಟ್ಟ ಪ್ರಶ್ನೆ ಬಂದಾಗ ಅವರು ಆ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬಾರದೆಂಬ ಕಟ್ಟಳೆಯನ್ನು ಹಾಕಿದ್ದೇವೆ.

ಸ್ವಾಮಿ ನಾವೂ ನೀವೂ ಈ ಶಾಶನವನ್ನು ಓದಿದ್ದೇವೆ ಅವಿಶ್ವಾಸ ನಿರ್ಣಯವನ್ನು ತರತಕ್ಕ ಉದ್ದೇಶ ಏನು ಅದರ ಕಾರ್ಯಕಾರಣ ಏನು ಎನ್ನುವ ಬಗ್ಗೆ ಚೆನ್ನಾಗಿ ವಿಚಾರ ಮಾಡಬೇಕು ಈ ಶಾಸನವನ್ನು ನಾವು ಮಾಡಿದ್ದೇವೆ ಅಧ್ಯಕ್ಷರಿಗೆ ಸಂಬಂಧ ಪಟ್ಟ ಅವಿಶ್ವಾಸ ನಿರ್ಣಯವಾಗಿದ್ದರೆ ಅದನ್ನು ಜಿಲ್ಲಾಧಿಕಾರಿಯವರಿಗೆ ಕೊಡಬೇಕು ಸರ್ಕಾರದ ಪುಟ್ಟದಲ್ಲಿ ಕೆಲವು ಅಧಿಕಾರಿಗಳು ಕಾರ್ಯದರ್ಶಿಗಳು ಕುಳಿತು ಚರ್ಚೆ ಮಾಡುತ್ತಾರೆ ನಂತರ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆ ನಾವು ಇಲ್ಲಿ ಈ ರೀತಿ ಏತಕ್ಕೆ ಮಾಡಿದ್ದೇವೆ ಎಂಬುದನ್ನು ತಮಗೆ ಹೇಳುತ್ತೇನೆ ಈ ಮಸೂದೆ ಪರಿಪೂರ್ಣವಾಗಿರಬೇಕು ಉತ್ತಮವಾಗಿರಬೇಕು ಉದ್ದೇಶ ಸಾಫಲ್ಯವಾಗಬೇಕು ಎಂಬುದು ನಮ್ಮ ನಿಮೆಲ್ಲರ ಅಭಿಪ್ರಾಯ. ಇದಕ್ಕೆ ತಮ್ಮದು ಯಾರದ್ದೂ ಭಿನ್ನಾಭಿಪ್ರಾಯ ಇಲ್ಲವೆಂದು ಅಂದುಕೊಂಡಿದ್ದೇನೆ ಇದರಲ್ಲಿ ಚೀಫ್ ಸೆಕ್ರೆಟರಿ ಬೇಡ, ಕಮಿಷನರ್ ಬೇಡ. ಮಾನ್ಯ ಸದಸ್ಯರಾದ ಕೊಟ್ಟಪ್ಪನವರು ಏನು ಹೇಳಿದ್ದಾರೆ. ಅದನ್ನು ನಾವು ಪರಿಶೀಲಿಸಿ ನಾವು ಸಮಗ್ರವಾದ ವಿಷಯಗಳನ್ನು ಅಳವಡಿಸಿಕೊಂಡು ತರೋಣ. ಆದ್ದರಿಂದ ಮಾನ್ಯ ಸದಸ್ಯರು ತಾವು ತಂದಿರತಕ್ಕ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕು ಈ ಮಸೂದೆಯ ಬಗ್ಗೆ ವಿಚಾರ ವಿನಿಮಯ ಮಾಡಿ ಸಮಾಲೋಚನೆ ಮಾಡಿ ಈ ಅಧಿವೇಶನದಲ್ಲೇ ಬೇಕಾದರೂ ಇದನ್ನು ತರೋಣವೆಂದು ತಿಳಿಸಿ ಮಾನ್ಯ ಸದಸ್ಯರು ದಯವಿಟ್ಟು ಅವರ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಂಡು ಇದಕ್ಕೆ ಅನುಮತಿ ನೀಡಬೇಕೆಂದು ಪ್ರಾರ್ಥಿಸುತ್ತೇನೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಒಪ್ಪಿಕೊಂಡರೆ ತಮ್ಮ ಮರ್ಯಾದೆ ಏನು ಹೋಗ್ತು ಪೂರ್ತಿಲ್ಲ ಕಳೆದ ಸಾರಿ ತಂದಾಗ ಪೆಜ್ಯೂಲ್ಟ್ ಕ್ಯಾಸ್ಟ್ ಮತ್ತು ಪೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ತಾವೇ ಒಪ್ಪಿಕೊಂಡಿರುತ್ತೀರಿ.

ಶ್ರೀ ಆಬ್ದುಲ್ ನಜೀರ್‌ಸಾಬ್.—ಅಧ್ಯಕ್ಷರೆ ಅಧ್ಯಕ್ಷರಿಗೆ ವಿರುದ್ಧ ಮಾಡಿ ಮತ ನೀಡಿದವರಿಗೆ ಕಷ್ಟ ವಾಗುತ್ತದೆ, He is a political executive and he exercises executive authority.

ಶ್ರೀ ಎಂ. ವೀರಪ್ಪಮೊಯಿಲಿ.—ಇದು ಜನತೆಗೆ ಅಧಿಕಾರವನ್ನು ಕೈಗೆ ಕೊಡತಕ್ಕಂತ ಪ್ರಶ್ನೆ ಆದ್ದರಿಂದ ಈ ತಿದ್ದುಪಡಿಯನ್ನು ಒತ್ತಾಯಪಡಿಸುತ್ತೇನೆ.

Mr. SPEAKER.—The question is :

"That in sub-clause (1) of clause 4, for the words "to the chief Secretary to Government," the words "to the Adyaksha of Zilla Parishad" shall be substituted.

That in sub-clause (2) of clause 4, for the words "to the Divisional Commissioner", the word "Mayor" shall be substituted.

That in sub-clause (3) of clause 4, for the words "to the Deputy Commissioner", the words "to the President of Town Muncipal Council" shall be substituted.

That in sub-clause (4) of clause 4, for the words "to the Chief Secretary to the Zilla Parishad", the words "to the Pradhan" shall be substituted.

That in para 2 of clause 4, after the word "refrence" and before the word and following words shall be inserted. "after giving proper opportunity to the respective member or councillor or the political party".

Sri M. MALLIKARJUNA KHARGE.—We insist for Division.

(The house divided)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—please dont insult non-officials. ಕಳೆದಸಾರಿ ಎಕ್ಸ್ ಮಿನಿಸ್ಟರ್ ಎಕ್ಸ್ ಎಂ. ಎಲ್.ಎ.ಗಳು ತಪ್ಪು ಮಾಡಿದ್ದರೆ ಎನ್‌ಕ್ವಯರಿ ಮಾಡಿಸುತ್ತಿದ್ದಿರಿ.....

ಶ್ರೀ ಎಂ. ವೀರಪ್ಪಮೊಯಿಲಿ.—ನೀವು ಅಧಿಕಾರಿಗಳ ಕೈಗೆ ಮುಂದೆಯೂ ಕೂಡ ಅಧಿಕಾರವನ್ನು ಕೊಡುತ್ತಿದ್ದೀರಿ. ಜನತೆಗೆ ಅಧಿಕಾರವನ್ನು ಕೊಡುತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ಎರಡು ನಿಮಿಷಗಳು ಆಯಿತು. ಇನ್ನೂ ಗಂಟೆಯನ್ನು ಹಾಕಿದ್ದೀರಿ. ಇನ್ನು ಎಷ್ಟು ಸಮಯ ತೆಗೆದುಕೊಳ್ಳುತ್ತೀರಿ ?

ಅಧ್ಯಕ್ಷರು.—೧೦ ನಿಮಿಷಗಳು ಟೈಮ್ ಇರುತ್ತದೆ- ಬೇಕಾದರೆ ಅಮ್ಮ ಅವರು ಇದ್ದಾರೆ, ಅವರನ್ನು ಕೇಳಬಹುದು.ನ್ಯಾಯ ಅನ್ಯಾಯ ಏನಾಗಿದೆ ಸ್ವಲ್ಪ ತಡೆಯಿರಿ ಕೆಲವು ಫಾರ್ಮಾಲಿಟೀಸ್ ಇವೆ. ಮಾನ್ಯ ಪಾಟೀಲರು ಎರಡನೇ ಸಾರಿ ವಾದ ಮಾಡುತ್ತಿದ್ದಾರೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—೩ ನಿಮಿಷ ಆಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—೩ ನಿಮಿಷ ಆಯಿತು.

ಶ್ರೀ ಅಬ್ದುಲ್ ನಜೀರ್‌ಸಾಬ್.—ಅವರನ್ನೇ ಪ್ರಶ್ನೆ ಮಾಡುತ್ತಿರಲ್ಲ.

ಅಧ್ಯಕ್ಷರು.—ಈಗ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಸೂಚಿಸಿರುವ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

SRI MALLIKARJUNA KHARGE.—We press for Divison.

ಅಧ್ಯಕ್ಷರು.—ತಿದ್ದುಪಡಿಯ ಪರವಾಗಿರುವವರು ೩೫ ಮಂದಿ ತಿದ್ದುಪಡಿ ವಿರುದ್ಧವಾಗಿರುವವರು ೫೧ ಮಂದಿ.

(ಗೊಂದಲ)

(ತಿದ್ದುಪಡಿ ತಿರಸ್ಕೃತವಾಯಿತು)

ಶ್ರೀ ಎಂ. ಮಲ್ಲಿಕಾರ್ಜುನಖೂರ್ಗೆ.—ತಾವು ಕೌಂಟ್‌ಮಾಡುವಾಗ ಮಧ್ಯೆ ಕೆಲವರು ಬಂದರು

ಅಧ್ಯಕ್ಷರು.—ನಾವು ಅವರನ್ನು ಕೌಂಟ್ ಮಾಡಿರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಕೌಂಟ್ ಮಾಡುವಾಗ ಯಾರೂ ಒಳಗೆ ಬರಬಾರದು.

(ಗೊಂದಲ)

ಶ್ರೀ ಕೆ. ಬಿ. ಶಾಣಪ್ಪ.—ವೈ. ಕೆ. ರಾಮಯ್ಯನವರು ಮತ್ತು ಸಾಲೇರು ಸಿದ್ದಪ್ಪನವರು ಮೇಲೆ ಬಂದಿದ್ದಾರೆ.

(ಗೊಂದಲ)

ಅಧ್ಯಕ್ಷರು.—ಅವರನ್ನು ಕೌಂಟ್ ಮಾಡುವುದಿಲ್ಲ.

(ಗೊಂದಲ)

ಶ್ರೀ ಗೋಪಾಲ ಮುಕುಂದ ಕಾನಡೆ.—ನಮ್ಮಲ್ಲಿ ಯಾರೂ ಬಂದಿಲ್ಲ.

(ಗೊಂದಲ)

ಅಧ್ಯಕ್ಷರು.—ಇವರ ಕಡೆ ಯಾರು ಬಂದರೂ ಕೌಂಟ್ ಮಾಡುವುದಿಲ್ಲ. ಅವರ ಕಡೆ ಯಾರು ಬಂದರೂ ಕೌಂಟ್ ಮಾಡುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಕೌಂಟ್ ಮಾಡುವುದಿಲ್ಲ. ದಯವಿಟ್ಟು ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಅವರು ೪೬ ಜನ ಇದ್ದಾರೆ. ನಾವು ೪೮ ಇದ್ದೇವೆ. ಇನ್ನೊಮ್ಮೆ ಬೇಕಾದರೆ ಕೌಂಟ್ ಮಾಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀ ಆಚಾರ್ ಅವರನ್ನು ಬಿಡಬೇಕು. ರೈ ಅವರು ಆಮೇಲೆ ಬಂದಿದ್ದಾರೆ.

ಅಧ್ಯಕ್ಷರು.—ಈ ಕಡೆ (ವಿರೋಧಪಕ್ಷದ ಕಡೆ) ೮ ಸಾಲಿನಿಂದ ೩೫ ಮಂದಿ ಇದ್ದಾರೆ. ಇಲ್ಲಿ (ಆಡಳಿತ ಪಕ್ಷದ ಕಡೆ) ೮ ಸಾಲಿನಿಂದ ೫೧ ಜನ ಇದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖೂರ್ಗೆ.—ಕ್ಯಾಲ್ಕುಲೇಷನ್ ರಾಂಗ್ ಇದೆ. ಅವರು ೪೮ ಜನ ಇದ್ದಾರೆ.

ಅಧ್ಯಕ್ಷರು.—ಈಗ ಸರ್ಕಾರದವರು ಮಂಡಿಸಿರುವ ೪ನೇ ಖಂಡವು ವಿಧೇಯಕದ ಅಂಗವಾಗಿರ ಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ೪ನೇ ಖಂಡ ವಿಧೇಯಕದ ಅಂಗವಾಯಿತು.

ಖಂಡ ೫ರಿಂದ ೧೦ರ ವರೆಗೆ.—

ಅಧ್ಯಕ್ಷರು.—ಪ್ರಸ್ತಾವ ಹೀಗಿದೆ:

ಖಂಡ ೫ರಿಂದ ೧೦ರ ವರೆಗೆ (ಎರಡೂ ಸೇರಿದಂತೆ) ವಿಧೇಯಕದ ಅಂಗವಾಗಿಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ೫ರಿಂದ ೧೦ರ ಪರೆಗೆ (ಎರಡೂ ಸೇರಿದಂತೆ) ಖಂಡಗಳು ವಿಧೇಯಕದ ಅಂಗವಾದವು:

ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು.—ಪ್ರಸ್ತಾಪ ಹೀಗಿದೆ:

"ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿರಬೇಕು"

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿತು. ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಯಿತು.

ಪ್ರಸ್ತಾಪದ ಅಂಗೀಕಾರ

ಶ್ರೀ ಅಬ್ದುಲ್ ನಜೀರ್ ಸಾಬ್.—೧೯೮೩ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ವಿಧೇಯಕವನ್ನು ಅಂಗೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ.—೧೯೮೩ನೇ ಇಸವಿಯ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇದ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆ ನೀಡಲಾಯಿತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮೈಸೂರು, ಬೆಂಗಳೂರು ಮತ್ತು ತುಮಕೂರಿನಲ್ಲಿ ಪೋಲೀಸ್ ಫೈರಿಂಗ್ ನಡೆದುದರ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅದು ನಿನ್ನೆಯಿಂದ ಪೋಸ್ಟ್ ಪೋನ್ ಆಗುತ್ತಿದೆ.

ಅಧ್ಯಕ್ಷರು.—ಅದನ್ನು ನಂತರ ತೆಗೆದುಕೊಳ್ಳೋಣ. ಈಗ ವಿಧೇಯಕದ ಮುಂದೆ ಆಗಲಿ.

೧೯೮೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಅಬ್ದುಲ್ ನಜೀರ್ ಸಾಬ್.—(ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ಪಕ್ಕ ಮುಂಶಿಗಳು).—ಮಾನ್ಯ ಅಧ್ಯಕ್ಷರೆ, ೧೯೮೩ನೇ ಇಸವಿಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಪಂಚಾಯತ್ ಸಮಿತಿಗಳು, ಮಂಡಲ ಪಂಚಾಯಿತಿಗಳ ಮತ್ತು ನ್ಯಾಯ ಪಂಚಾಯಿತಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಜಿ. ಎಂ. ಕಾನಡೆ.—ಸಂವಿಧಾನದಲ್ಲೇ ಹೀ ಗಾದರೆ ಹೊರಗಡೆ ಹೇಗೆ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಶಾಸನ ಸಭೆಯಲ್ಲಿ ಅಂಗೀಕೃತವಾದ ವಿಧೇಯಕವನ್ನು ಜಾರಿಗೆ ತೊಡುವಾಗ ಕೆಲವು ಆಡಳಿತಾತ್ಮಕ ನ್ಯೂನತೆಗಳನ್ನು ಗಮನಿಸಿ ಸುಗ್ರೀವಾಜ್ಞೆ ಮುಖಾಂತರ ಕೆಲವು ತಿದ್ದುಪಡಿಗಳನ್ನು ಜಾರಿಗೆ ತೊಟ್ಟಿದ್ದೇವೆ. ಅದನ್ನು ಈಗ ಈ ತಿದ್ದುಪಡಿಯ ಮೂಲಕ ಶಾಶ್ವತವಾಗಿ ಮಾಡಿದ್ದೇವೆ. ಸ್ಟೇಟ್‌ಮೆಂಟ್ ಮತ್ತು ಆಬ್ಜೆಕ್ಟ್ಸ್ ಮತ್ತು ರೀಸನ್ಸ್‌ನಲ್ಲಿ ಏನು ಹೇಳಿದ್ದೇವೆ ಅದರ ಪ್ರಕಾರ ಸೆಕ್ಷನ್ ೫ನ್ನು ಅಮೆಂಡ್ ಮಾಡಿದ್ದೇವೆ. ಹಿಂದಿನ ಸೆಕ್ಷನ್ ಪ್ರಕಾರ ೨೫ ಗಂಟೆಯೊಳಗೆ ಜಾತಿ ಪ್ರಮಾಣ ಪತ್ರವನ್ನು ನಿಲ್ಲಿಸಬೇಕೆಂದಿರುವುದನ್ನು ೪೮ ಗಂಟೆಯೊಳಗೆ ನಿಲ್ಲಿಸ ಬೇಕೆಂದು ಮಾಡಿದ್ದೇವೆ. ಸೆಕ್ಷನ್ ೪೮ರಲ್ಲಿ ಅಸಿಸ್ಟೆಂಟ್ ಕಮೀಷನರ್‌ಗೆ ಅಧಿಕಾರ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳಿಗೆ ಇದ್ದ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ, ಏಕೆಂದರೆ ಒಂದೊಂದು ತಾಲ್ಲೂಕಿನಲ್ಲಿ